4

ಇಲಾಖೆ / ವಿಷಯ : DEPARTMENT / SUBJECT: ವಿಧಾನ ಪರಿಷತ್ತಿನ ಸದನ ಸಮಿತಿ

ಪತ್ರಿಕೆಯ ಹೆಸರು : NAME OF THE NEWS PAPER: [illegible] ದಿನಾಂಕ : DATE : 8/1/2021

[illegible] 8/1/21

# ಸದನ ಸಮಿತಿ ರಚನೆ ತಿಕ್ಕಾಟ




ವಿಧಾನಪರಿಷತ್ತಿನಲ್ಲಿ ಡಿಸೆಂಬರ್ 15ರಂದು ಜರುಗಿದ ಕುರುಕ್ಷೇತ್ರ ಸಂಗ್ರಾಮವನ್ನು ಅಣಕಿಸುವ ರೀತಿಯ ಗೆರಿಲ್ಲಾ ಮಾದರಿಯ ಕ್ಷಾತ್ರ ಪ್ರದರ್ಶನದ ಸತ್ಯಾಸತ್ಯದ ತನಿಖೆಗೆ ಸಂಬಂಧಿಸಿದಂತೆ ಸಭಾಪತಿ ಪ್ರತಾಪಚಂದ್ರಶೆಟ್ಟಿ ಅವರು ಸದನ ಸಮಿತಿಯನ್ನು ರಚಿಸಿರುವುದು ಸ್ವಾಗತಾರ್ಹ ಬೆಳವಣಿಗೆ. ಏಕೆಂದರೆ, ಇಡೀ ಕರ್ನಾಟಕವೇ ತಲೆತಗ್ಗಿಸಬೇಕಾದ ರೀತಿಯ ಬೆಳವಣಿಗೆಯನ್ನು ಕನಿಷ್ಠ ಪಕ್ಷ ಸತ್ಯಾಂಶ ತಿಳಿದು ತಪ್ಪಿತಸ್ಥರಿಗೆ ತಕ್ಕ ಶಿಕ್ಷೆ ವಿಧಿಸಲು ಸದನ ಸಮಿತಿಯ ತನಿಖೆ ನೆರವಾಗಬಹುದು. ಆದರೆ, ಸದನ ಸಮಿತಿಯ ರಚನೆಗೆ ಸಭಾಪತಿಯವರಿಗೆ ಉಂಟೆ ಎಂಬ ಪ್ರಶ್ನೆ ಈಗ ಉದ್ಭವವಾಗಿದೆ. ಇಂತಹ ಪ್ರಶ್ನೆ ಉದ್ಭವವಾಗಿರುವುದು ಇದೇ ಮೊದಲಲ್ಲ. 1983ರಲ್ಲಿ ಡಿ.ಬಿ ಚಂದ್ರೇಗೌಡ ವಿಧಾನಸಭೆ ಅಧ್ಯಕ್ಷರಾಗಿದ್ದಾಗ ಸದನ ಸಮಿತಿ ರಚಿಸಿದ ವಿಚಾರಕ್ಕೂ ಕೂಡಾ ಇದೇ ರೀತಿಯ ವಿವಾದ ತಲೆದೋರಿತ್ತು. ಆಗಿನ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರ ಸೋದರ ಸಂಬಂಧಿ ಗಣೇಶ ಹೆಗಡೆ ಅವರ ವಿರುದ್ಧದ ಅಕ್ಕಿ ಕಳ್ಳಸಾಗಣೆ ಆರೋಪಕ್ಕೆ ಸಂಬಂಧಿಸಿದಂತೆ ಮೈಸೂರಿನ ಕೆ.ಆರ್. ಕ್ಷೇತ್ರದ ಶಾಸಕ ಎಚ್. ಗಂಗಾಧರನ್ ನೇತೃತ್ವದಲ್ಲಿ ಸದನ ಸಮಿತಿಯನ್ನು ಚಂದ್ರೇಗೌಡರು ರಚಿಸಿದ್ದರು. ಆಗಿನ ಪ್ರತಿಪಕ್ಷದ ನಾಯಕ ವೀರಪ್ಪ ಮೊಯ್ಲಿ ಸೇರಿದಂತೆ ಇಡೀ ಕಾಂಗ್ರೆಸ ಪಕ್ಷದ ಮುಖಂಡರು ಸದನ ಸಮಿತಿ ರಚನೆಗೆ ಇಲ್ಲದ ಅಧಿಕಾರವನ್ನು ಸಭಾಧ್ಯಕ್ಷರು ಚಲಾಯಿಸಿದ್ದಾರೆ ಎಂದು ವಿರೋಧಿಸಿದ್ದರು.

ಸಭಾಧ್ಯಕ್ಷರಿಗೆ ಅಧಿವೇಶನದ ಕಲಾಪ ನಡೆಯುವಾಗ ಮಾತ್ರ ಪರಮಾಧಿಕಾರ ಚಲಾಯಿಸುವ ಹಕ್ಕಿರುತ್ತದೆ. ಉಳಿದ ಸಂದರ್ಭಗಳಲ್ಲಿ ಯಾವುದೇ ರೀತಿಯ ಹಕ್ಕಿರುವುದಿಲ್ಲ ಎಂಬುದು ಆಗಿನ ಕಾಂಗ್ರೆಸ್ ಪಕ್ಷದ ಮುಖಂಡರ ವಾದ. ಅಕ್ಕಿ ಕಳ್ಳಸಾಗಣೆ ಆರೋಪ ಕೇಳಿಬಂದು ವಿಧಾನಸಭೆಯಲ್ಲಿ ಮಾರ್ದನಿಗೊಂಡಾಗ ಸಭಾಧ್ಯಕ್ಷರು ಸದನ ಸಮಿತಿ ರಚಿಸಿದ್ದರೆ ಬಹುಶಃ ಆಕ್ಷೇಪ ಇರುತ್ತಿರಲಿಲ್ಲ. ಸದನದ ಕಲಾಪ ಅನಿರ್ದಿಷ್ಟ ಕಾಲದವರೆಗೆ ಮುಂದೂಡಿಕೆ ಮಾಡಿದ ನಂತರ ಸದನ ಸಮಿತಿ ರಚಿಸಿದ್ದು ಈ ವಿವಾದಕ್ಕೆ ಕಾರಣವಾಗಿತ್ತು. ಈ ವಿವಾದ ಯಾವ ಮಟ್ಟಕ್ಕೆ ಹೋಯಿತೆಂದರೆ ಕಾಂಗ್ರೆಸ್ ಪಕ್ಷದ ಸದಸ್ಯರು ಈ ಸದನ ಸಮಿತಿಗೆ ಬಹಿಷ್ಕಾರ ಹಾಕುವಷ್ಟರ [illegible]ಟ್ಟಿಗೆ ತಲುಪಿತ್ತು. ಬಹಿಷ್ಕಾರವನ್ನು ಪರಿಗಣಿಸದೆ ಎಚ್. ಗಂಗಾಧರನ್ ಸಮಿತಿ ಆರೋಪದ ಬಗ್ಗೆ ತನಿಖೆ ನಡೆಸಿ ಸಭಾಧ್ಯಕ್ಷರಿಗೆ ಆರೋಪದಲ್ಲಿ ಹುರುಳಿಲ್ಲ ಎಂಬ ಅಭಿಪ್ರಾಯ ಇರುವ ವರದಿಯನ್ನು ಸಲ್ಲಿಸಿಯೂ ಆಗಿತ್ತು ಆದರೆ, ಅದಕ್ಕೆ ಕಾಂಗ್ರೆಸ್ ಪಕ್ಷ ಮಾನ್ಯತೆ ಕೊಡಲು ಕಡೆಗೂ ಒಪ್ಪಲಿಲ್ಲ. ಸಭಾಧ್ಯಕ್ಷರಾಗಿದ್ದ ಡಿ.ಬಿ ಚಂದ್ರೇಗೌಡ ಅವರು ಹಲವು ವಿಚಾರ ಸಂಕಿರಣಗಳಲ್ಲಿ ತಮ್ಮ ನಿಲುವನ್ನು ಸಮರ್ಥಿಸಿಕೊಂಡು ಮುಂಬೈನಲ್ಲಿ ನಡೆದ ಅಖಿಲ ಭಾರತ ಶಾಸನ ಸಭಾ ಸಭಾಧ್ಯಕ್ಷರ ಸಮ್ಮೇಳನದಲ್ಲಿ ಪ್ರಸ್ತಾಪಿಸಿ ಸಭಾಸದರ ಸಹಮತ ಪಡೆದುಕೊಂಡದ್ದೂ ಆಯಿತು. ಚಂದ್ರೇಗೌಡರು ಸಭಾಧ್ಯಕ್ಷ ಸ್ಥಾನದಿಂದ ನಿರ್ಗಮಿಸಿದ ಮೇಲೂ ಈ ವಿವಾದ ತಣ್ಣಗಾಗಿರಲಿಲ್ಲ. ಅಂದ ಹಾಗೆ ವಿಧಾನಪರಿಷತ್ತಿನ ಪ್ರಸ್ತುತ ಸಭಾಪತಿಯಾಗಿರುವ ಪ್ರತಾಪಚಂದ್ರ ಶೆಟ್ಟರು ಆಗ ವಿಧಾನಸಭೆ ಸದಸ್ಯರಾಗಿದ್ದರು. ಡಿಸೆಂಬರ್ 15ರ ಸದನದಲ್ಲಿ ಗುದ್ದಾಟ ನಡೆದು ಕಲಾಪವನ್ನು ಅನಿರ್ದಿಷ್ಟ ಕಾಲ ಮುಂದೂಡಿದ ಕೆಲ ದಿನಗಳ ನಂತರ ಸಭಾಪತಿ ಪ್ರತಾಪಚಂದ್ರ ಶೆಟ್ಟರು ಜೆಡಿಎಸ್ ಶಾಸಕ ಮರಿತಿಬ್ಬೇಗೌಡರ ನೇತೃತ್ವದಲ್ಲಿ ರಚಿಸಿರುವ ಸದನ ಸಮಿತಿಗೂ ಕೂಡಾ ಇದೇ ವಿವಾದದ ಸೋಂಕು ತಟ್ಟಿದೆ. ಮೇಲ್ಮನೆಯ ಅಧಿವೇಶನ ಮುಂದೂಡಲಾಗಿದೆ. ಕಲಾಪ ಇಲ್ಲದ ಸಂದರ್ಭದಲ್ಲಿ ಸಭಾಧ್ಯಕ್ಷರಿಗೆ ಯಾವುದೇ ರೀತಿಯ ನಿರ್ಣಾಯಕ ಅಧಿಕಾರ ಚಲಾವಣೆಗೆ ಅವಕಾಶವಿಲ್ಲ. ಹೀಗಿರುವಾಗ ಸದನ ಸಮಿತಿ ರಚಿಸಿದರೆ ಅದಕ್ಕೆ ಕಾನೂನಿನ ಔಚಿತ್ಯ ಸಿಕ್ಕುತ್ತದೆಯೇ ಎಂಬ ಪ್ರಶ್ನೆ ಮೂಲಭೂತ ಅಂಶಗಳನ್ನು ಕೇಳುತ್ತದೆ. ಸಭಾಧ್ಯಕ್ಷರ ಜವಾಬ್ದಾರಿ ಮತ್ತು ಕರ್ತವ್ಯಗಳ ಬಗ್ಗೆ ನಿಯಮಾವಳಿಯಲ್ಲಿ ಸ್ಪಷ್ಟವಾಗಿದೆ ಕೌಲ್ ಮತ್ತು ಶಕ್ದರ್ ವಿರಚಿತ ಗ್ರಂಥದಲ್ಲಿ ಸಭಾಧ್ಯಕ್ಷರ ಜವಾಬ್ದಾರಿ ಮತ್ತು ಕರ್ತವ್ಯದ ಬಗ್ಗೆ ಹಲವು ನಿದರ್ಶನಗಳ ಸಮೇತ ವಿವರಣೆಗಳಿವೆ. ಆದರೆ, ಕೆಲವು ಸಂದರ್ಭಗಳ ವಿಶ್ಲೇಷಣೆಯಲ್ಲಿ ಅಡ್ಡಗೋಡೆ ಮೇಲೆ ದೀಪ ಇಡುವ ಮಾತುಗಳಿವೆ. ಜನತಾ ಪಕ್ಷದ ಸರ್ಕಾರದಲ್ಲಿ ಆಗಿನ ಕಾನೂನು ಸಚಿವರಾಗಿದ್ದ ಪ್ರೊ.ಎ.ಲಕ್ಷ್ಮೀಸಾಗರ್ ಸದನದಲ್ಲಿ ಮಂಡಿಸಿದ ನಿಲುವುಗಳು ಬಹುಶಃ ಈಗ ಕಾಂಗ್ರೆಸ್ ಪಕ್ಷದ ಮುಖಂಡರ ವಾದಕ್ಕೆ ಆಧಾರವಾಗಬಹುದೇನೋ. ಲಕ್ಷ್ಮೀಸಾಗರ್ ಮಂಡಿಸಿದ ವಾದದ ಸಾರಾಂಶವೆಂದರೆ 'ಸಭಾಧ್ಯಕ್ಷರೆಂದರೆ ಸಭಾಧ್ಯಕ್ಷರು. ಅವರು ಪೂರ್ಣಾವಧಿ ಅಧಿಕಾರ ಹೊಂದಿರುತ್ತಾರೆ. ಅಧಿವೇಶನ ನಡೆಯುವಾಗ ಮಾತ್ರ ಅಧಿಕಾರ ಚಲಾಯಿಸಲು ಅವಕಾಶವಿದೆ ಎಂಬ ವಿಶ್ಲೇಷಣೆಗೆ ಆಧಾರಗಳಿಲ್ಲ. ಹೌಸ್ ಆಫ್ ಕಾಮನ್ಸ್‌ನಲ್ಲಿ ಸಭಾಧ್ಯಕ್ಷರ ಕಾರ್ಯನಿರ್ವಹಣೆಯ ಹಲವಾರು ನಿದರ್ಶನಗಳಲ್ಲಿ ಕಂಡುಬರುವ ಅಂಶವೆಂದರೆ ಒಂದೋ ಸಭಾಧ್ಯಕ್ಷರನ್ನು ಸಭಾಧ್ಯಕ್ಷರು ಎಂದು ಒಪ್ಪಿಕೊಳ್ಳಬೇಕು ಇಲ್ಲವೇ ಇವರು ಸಭಾಧ್ಯಕ್ಷರಲ್ಲ ಎನ್ನುವ ನಿಲುವಿಗೆ ಬರಬೇಕು. ಇವೆರಡನ್ನು ಬಿಟ್ಟು ಅನುಕೂಲಸಿಂಧು ನಿಲುವನ್ನು ತಾಳುವುದು ಸ್ವಾರ್ಥ ಸಾಧನೆಗಾಗಿ ಮಾತ್ರ' ಆದರೆ, ಕಾಂಗ್ರೆಸ್ ಪಕ್ಷದ ಮುಖಂಡರಾದ ವೀರಪ್ಪ ಮೊಯ್ಲಿ, ಕೆ.ಎಚ್. ಪಾಟೀಲ್, ಕೆ.ಎಚ್. ರಂಗನಾಥ್, ಬಸವಲಿಂಗಪ್ಪ ಮೊದಲಾದವರು ಲಕ್ಷ್ಮೀಸಾಗರ್ ನಿಲುವನ್ನು ಒಪ್ಪಲಿಲ್ಲ. ಹೀಗಾಗಿ ಬಿಕ್ಕಟ್ಟು ಉದ್ಭವಿಸಿತ್ತು. ಆಗಿನ ಬಿಜೆಪಿ ಅಧ್ಯಕ್ಷರಾಗಿದ್ದ ಎ.ಕೆ. ಸುಬ್ಬಯ್ಯ ಅವರು ಕೂಡಾ ಲಕ್ಷ್ಮೀಸಾಗರ್ ನಿಲುವಿಗೆ ಸಹಮತ ಸೂಚಿಸಿದ್ದರು.

ಈಗ ವಿಧಾನಪರಿಷತ್ತಿನಲ್ಲಿ ಜರುಗಿರುವ ಗುದ್ದಾಟದ ಪ್ರಕರಣಕ್ಕೂ 80ರ ದಶಕದ ಅಕ್ಕಿ ಕಳ್ಳಸಾಗಣೆ ಪ್ರಕರಣಕ್ಕೂ ನೇರವಾದ ಸಂಬಂಧವಿದೆ. ಸಂಬಂಧವಿರುವುದು ಸಭಾಧ್ಯಕ್ಷರ ಸದನ ಸಮಿತಿ ರಚನೆಗೆ ಕೈಗೊಂಡಿರುವ ನಿರ್ಧಾರಗಳ ಬಗ್ಗೆ ಮಾತ್ರ. ಬಿಜೆಪಿ ಮುಖಂಡರು ಈಗಿನ ಸದನ ಸಮಿತಿ ರಚನೆಯನ್ನು ಒಪ್ಪಲು ನಿರಾಕರಿಸುತ್ತಾರೆ. ಏಕೆಂದರೆ, ಅಧಿವೇಶನ ಇಲ್ಲದಿರುವಾಗ ಸಭಾಪತಿಗಳು ಕೈಗೊಳ್ಳುವ ಕ್ರಮಕ್ಕೆ ನೆಲೆಬೆಲೆ ಇಲ್ಲ ಎಂಬುದು ಅವರು ಕೊಡುವ ವಿವರಣೆ. ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಅವರು ಈ ವಿವಾದವನ್ನು ಕೆದಕದೆ ಸದನ ಸಮಿತಿ ರಚಿಸಿರುವುದು ಕೇವಲ ಅಧಿಕಾರಿಗಳ ವಿಚಾರಣೆಗೆ ಮಾತ್ರ. ಈ ಸಮಿತಿಗೆ ಶಾಸಕರನ್ನಾಗಲೀ ಅಥವಾ ಮಂತ್ರಿಗಳನ್ನಾಗಲಿ ವಿಚಾರಣೆಗೆ ಒಳಪಡಿಸುವ ಅಧಿಕಾರವಿಲ್ಲ ಎಂದು ನೇರವಾಗಿ ಹೇಳುತ್ತಾರೆ. ಆದರೆ, ಸಭಾಪತಿಗಳ ಆದೇಶದಂತೆ ವಿಧಾನಪರಿಷತ್ತಿನ ಕಾರ್ಯದರ್ಶಿಯವರು ಹೊರಡಿಸಿರುವ ಆದೇಶದ ಪ್ರಕಾರ ಘಟನಾವಳಿಯಲ್ಲಿ ಭಾಗಿಯಾಗಿರುವ ಶಾಸಕರು, ಮಂತ್ರಿಗಳು ಹಾಗೂ ಅಧಿಕಾರಿಗಳ ವಿಚಾರಣೆಗೆ ಅವಕಾಶವಿದೆ. ಹೀಗಾಗಿ ಸಂಸದೀಯ ವ್ಯವಸ್ಥೆಯ ಖಾತೆ ನಿರ್ವಹಿಸುವ ಸಚಿವ ಮಾಧುಸ್ವಾಮಿ ಅವರ ನಿಲುವಿಗೂ ಹಾಗೂ ಸದನವನ್ನು ನಿರ್ವಹಿಸುವ ಹೊಣೆ ಹೊತ್ತಿರುವ ಸಭಾಪತಿ ಪ್ರತಾಪಚಂದ್ರ ಶೆಟ್ಟಿ ಅವರಿಗೂ ಗುಣಾತ್ಮಕ ವ್ಯತ್ಯಾಸವಿದೆ. ವ್ಯತ್ಯಾಸ ಸೃಷ್ಟಿಯಾಗಲು ಪ್ರಸ್ತುತ ಬಿಕ್ಕಟ್ಟಿನ ರಾಜಕಾರಣದ ದೃಷ್ಟಿ ಕಾರಣವೋ ಇಲ್ಲವೆ ಕಾನೂನಿನ ದೃಷ್ಟಿದೋಷ ಕಾರಣವೋ ಎಂಬುದು ಸ್ಪಷ್ಟವಾಗಬೇಕಿದೆ.

1990-91ರಲ್ಲಿ ಬೆಂಗಳೂರಿನಲ್ಲಿ ನಡೆದ ಅಖಿಲ ಭಾರತ ಸಭಾಧ್ಯಕ್ಷರುಗಳ ಸಮ್ಮೇಳನದಲ್ಲಿ ಪಾಲ್ಗೊಳ್ಳಲು ಆಗಮಿಸಿದ್ದ ಆಗಿನ ಲೋಕಸಭಾಧ್ಯಕ್ಷ ರವಿ ರೇ ಅವರು ಪತ್ರಿಕಾಗೋಷ್ಠಿಯೊಂದರಲ್ಲಿ ಈ ಪ್ರಶ್ನೆಯನ್ನು ಮುಂದಿಟ್ಟಾಗ 'ಇಲ್ಲದ ವಿವಾದ ಏಕೆ ಸೃಷ್ಟಿಸುತ್ತೀರಿ' ಎಂದು ಕಣ್ಣುಮಿಟುಕಿಸಿ ಸುಮ್ಮನಾಗಿದ್ದರು. ತದನಂತರ ಪತ್ರಿಕಾಗೋಷ್ಠಿ ಮುಗಿಯುವ ಮುನ್ನ ಮತ್ತೆ ಆ ಪ್ರಶ್ನೆಯನ್ನು ನೆನಪಿಸಿ 'ಕ್ಷಮಿಸಿ. ಬೇಕಂತಲೇ ನಾನು ಆ ಉತ್ತರ ನೀಡಿದೆ. ಸಭಾಧ್ಯಕ್ಷರಿಗೆ ಅಧಿವೇಶನ ಇಲ್ಲದಿರುವಾಗ ಪರಮಾಧಿಕಾರ ಚಲಾಯಿಸುವ ಬಗ್ಗೆ ಸ್ಪಷ್ಟವಾದ ಮಾರ್ಗಸೂಚಿ ಇಲ್ಲ. ಈಗಿರುವುದು ವ್ಯಕ್ತಿ ಆಧಾರಿತ ಅಥವಾ ಪಕ್ಷ ಆಧಾರಿತ ಮಾರ್ಗಸೂಚಿ. ನಮಗೆ ಬೇಕಾಗಿರುವುದು ವಸ್ತುನಿಷ್ಠವಾದ ಮಾರ್ಗಸೂಚಿ. ಪಕ್ಷಗಳ ಅನುಕೂಲಕ್ಕೆ ರೂಪುಗೊಳ್ಳುವ ಈ ಕಾರ್ಯಸೂಚಿಯನ್ನು ಸಮರ್ಥಿಸಲಾರೆ - ನಿರಾಕರಿಸಲಾರೆ. ಏಕೆಂದರೆ, ನಾನೂ ಕೂಡಾ ಒಬ್ಬ ರಾಜಕಾರಣಿ. ಕೆಲ ಕಾಲ ಕೇಂದ್ರ ಮಂತ್ರಿಯಾಗಿದ್ದವನು. ಈ ಪ್ರಶ್ನೆ ಮುಂದಿನ ಸಮ್ಮೇಳನದಲ್ಲಿ ಮುಖ್ಯ ವಿಷಯವಾಗಿ ಚರ್ಚೆಯಾಗುವಂತೆ ನೋಡಿಕೊಳ್ಳುವೆ' ಎಂದು ಹೇಳಿದ್ದು ಅರ್ಥಗರ್ಭಿತವಾಗಿತ್ತು. ಆದರೆ, ಕಾಲದ ಉರುಳಿನಲ್ಲಿ ಆಗಿನ ಲೋಕಸಭೆ ವಿಸರ್ಜನೆಯಾಗಿ 1991ರಲ್ಲಿ ಹೊಸ ಚುನಾವಣೆ ನಡೆದ ಮೇಲೆ ರವಿ ರೇ ಚುನಾವಣೆಯಲ್ಲಿ ಸೋತರು. ಲೋಕಸಭಾಧ್ಯಕ್ಷರಾಗಿ ಶಿವರಾಜ ಪಾಟೀಲ್ ಅಧಿಕಾರ ವಹಿಸಿಕೊಂಡ ನಂತರ ಈ ಪ್ರಶ್ನೆ ಕಾಲಗರ್ಭದಲ್ಲಿ ಹೂತುಹೋಯಿತು.

ನೆನಪಿನ ಕಣಜ



ಸೂತ್ರಧಾರ